6) ರಾಜ್ಯದಲ್ಲಿ ವಿದ್ಯುತ್‌ಚಾಲಿತ ಮಗ್ಗಗಳ ಉದ್ಯಮ ವ್ಯವಸ್ಥಿತವಾಗಿ ಬೆಳೆಯಲು ಅಗತ್ಯ ಪರಿಸರ ರೂಪಿಸುವುದು.

7) ವಿದ್ಯುತ್ ಮಗ್ಗ ಸ್ಥಾಪಿಸ ಬಯಸುವ ಉದ್ಯಮ ಶೀಲರಿಗೆ ಮಾರ್ಗದರ್ಶನ ಹಾಗ ಪ್ರೋತ್ಸಾಹ ನೀಡುವುದು.

ರಾಜ್ಯದಲ್ಲಿ ಕಬ್ಬಿನ ದರವನ್ನು ನಿಗದಿ ಮಾಡಲು ಏಕ ಸದಸ್ಯ ಆಯೋಗ.

656 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಕರ್ನಾಟಕ ರಾಜ್ಯದಲ್ಲಿ ಕಬ್ಬಿನ ಬೆಲೆಯನ್ನು ನಿಗಧಿ ಮಾಡಲು ಸರ್ಕಾರದವರು ಏಕ ಸದಸ್ಯ ಆಯೋಗವನ್ನು ನೇಮಿಸಲಾಗಿದೆಯೇ;

(ಆ) ಹಾಗಿದ್ದಲ್ಲಿ, ಈ ಆಯೋಗಕ್ಕೆ ಯಾವ ರೀತಿ ಕಾರ್ಯಸೂಚಿಯನ್ನು ನಿಗಧಿ ಮಾಡಲಾಗಿದೆ;

ಡಾ: ಹೆಗ್ಗಪ್ಪ ಡಿ. ಲಮಾಣಿ (ಸಕ್ಕರೆ ಸಚಿವರು) :

(ಅ) ಏಕಸದಸ್ಯ ಆಯೋಗವನ್ನು ಇನ್ನೂ ನೇಮಿಸಿರುವುದಿಲ್ಲ. ಆದರೆ, ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

(ಆ) ಉದ್ಭವಿಸುವುದಿಲ್ಲ.

ಬೆಂಗಳೂರಿನಲ್ಲಿ ಯಾವುದೇ ಲೈಸನ್ಸ್ ಇಲ್ಲದೆ ಅಂಗಡಿಗಳನ್ನು ನಡೆಸುತ್ತಿರುವ ಬಗ್ಗೆ.

654 - ಶ್ರೀ ಗುರುಪಾದಪ್ಪ ನಾಗ್ಮಾರಪಳ್ಳಿ (ಔರಾದ್) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದಲ್ಲಿ ಕಾನೂನಿನನ್ವಯ ನೋಂದಾಯಿಸಲಾಗಿರುವ ಅಂಗಡಿ ಮತ್ತು ಮಳಿಗೆಗಳ ಸಂಖ್ಯೆ:ಎಷ್ಟು;

ಆ) ಬೆಂಗಳೂರು ನಗರದಲ್ಲಿ ನೂರಾರು ಅಂಗಡಿ ಮತ್ತು ಮಳಿಗೆಗಳು ಶಾಸನದಡಿಯಲ್ಲಿ ನೋಂದಾಯಿಸಿಕೊಳ್ಳದೇ ಅನಧಿಕೃತವಾಗಿ ವ್ಯವಹಾರ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಸದರಿ ಶಾಸನದಡಿಯಲ್ಲಿ ನೋಂದಾಯಿಸಿದಂಥ ಅಂಗಡಿ ಮತ್ತು ಮಳಿಗೆಗಳವರು ಕಾನೂನುಗಳನ್ನು ಸರಿಯಾಗಿ ಪಾಲಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು;

ಉ) ಬೆಂಗಳೂರು ನಗರದಲ್ಲಿರುವ ಎಲ್ಲಾ ಅಂಗಡಿ ಹಾಗೂ ಮಳಿಗೆಗಳಲ್ಲಿ ಕೆಲಸ ಮಾಡತಕ್ಕ ನೌಕರರುಗಳಿಗೆ ಕನಿಷ್ಠ ವೇತನ ನಿಗದಿಪಡಿಸಲು ಸರ್ಕಾರದವರು ಆಲೋಚಿಸುವರೇ?

ಶ್ರೀ ಬ್ಲೇಸಿಯಸ್. ಎಂ. ಡಿಸೋಜಾ (ಕಾರ್ಮಿಕ ಸಚಿವರು):

ಅ) 1992ರ ಸಾಲಿನ ಅಂತ್ಯಕ್ಕೆ 48, 592 ನೋಂದಾಯಿತ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು ಇವೆ.

ಆ) ಇಲ್ಲ.

ಇ) ಹೌದು.